


ಎಡದಿಂದ ಬಲಕ್ಕೆ
1. ವಿಫಲವಾದ ಪ್ರಯತ್ನದ ಪರಿಣಾಮವೇ ಈ ಪ್ರಳಯ (3)
3. ಪರಿತಪಿಸುತ್ತಿದ್ದಾನೆ ಹೌದು. ಆದರೆ ಆತ ಭಾರೀ ಪರಾಕ್ರಮಿ (3)
4. ಸ್ವರಕ್ಷಣೆಗೆಂದು ಹೋರಾಡಿದವನೊಬ್ಬ ಮಹಾ ದೈತ್ಯ, ಕ್ರೂರಿ (3)
6. ನಿರಾಸಕ್ತಿ ಹೋಗಲಾಡಿಸಿದವರ ಮೇಲೆ ಅವನಿಗ ಗಾಢ ಪ್ರೇಮ (4)
7. ಎಲ್ಲರನ್ನೂ ಕಳಿಸುವಂತೆ ಆಕರ್ಷಿಸಿದ್ದು 'ಕಪ್ಪು ಮಾರುಕಟ್ಟೆ' (4)
9. ದೂತರ ಸಹಾಯ ಪಡೆದೇ ನಡೆದದ್ದು ಎಲ್ಲ ಏರ್ಪಾಡು (4)
11. ವ್ಯಾಪಾರೀ ಜನರ ಬಂಧು ಮಿತ್ರರ ಗುಂಪು (4)
15. ಅಂಥ ಸಭೆಯಲ್ಲಿ ಮಾತನಾಡುವುದು ಕಿಂಚಿತ್ತೂ ಕಷ್ಟ ಇಲ್ಲ (3)
16. ಮುಪ್ಪಿನ ಕಾಲದಲ್ಲೂ ಇದೆಂಥ ಸೊಕ್ಕು, ಗರ್ವ! (3)
17. ಈ ಮನೆಯಲ್ಲಿ ಕುಳಿತರೇ ಕಂಡೀತು ಒಂದು ಪ್ರಸಿದ್ಧ ಪುಣ್ಯ ನದಿ (3)

ಮೇಲಿಂದ ಕೆಳಕ್ಕೆ
1. ವಿಪ್ರನಿಗೆ ಪ್ರಿಯವಾದದ್ದು ಇಂತಹದೇ ಅರಣ್ಯ (3)
2. ವರುಷದಾದ್ಯಂತ ನಿರಂತರ ಒತ್ತಾಯ (3)
3. ಪುರೋಹಿತರ ಮಾತಿನಂತೆ ಏಟು ಬಿತ್ತು (3)
5. ಹಪ್ಪಳ ಮುರಿದಂತಹ ಸದ್ದು ಕೇಳಿಸಿತೇ? (3)
6. ಆದಿಯಿಂದ ಅಂತ್ಯದವರೆಗೂ ಬರೀ ವಿಸ್ಮಯ (3)
8. ತಾತ್ಪರ್ಯವನ್ನು ಗ್ರಹಿಸಲಾರ – ಭಾರೀ ಪೆದ್ದ! (3)
10. ದ್ವೇಷ ಸಾಧಿಸಲು ಬಂದರೆ ಚೆನ್ನಾಗಿ ನಿಂದಿಸು (3)
12. ಅಲಕಾಪುರಿಗೆ ಹೊರಟ ಕುದುರೆಯನ್ನೇರಲು ಬಳೆ – ಮೆಟ್ಟಿಲು (3)
13. ಅಭ್ಯುದಯವನ್ನು ಖಾತ್ರಿಗೊಳಿಸುವಂತಹ ರಕ್ಷಣೆ ಸಿಕ್ಕೀತೇ? (3)
14. ಮುನಿ ಜನರನ್ನು ಕಂಡೊಡನೆ ವಂದನೆ (3)

## 09–07–15ರ ಉತ್ತರಗಳು

ಎಡದಿಂದ ಬಲಕ್ಕೆ:
1. ಸಹೋದರ; 3. ಗೋದಾಮು; 4. ಸಾರಂಗಿ; 6. ಕಾಲಭಯ; 7. ಹವಣಿಸು; 9. ನರೋತ್ತಮ; 12. ಆಮೆವೇಗ; 14. ನರಕ; 15. ಭಾವನೆ; 16. ರಣರಂಗ.

ಮೇಲಿಂದ ಕೆಳಕ್ಕೆ:
1. ಸಮುದಾಯ; 2. ರಸಾರುಹ; 3. ಗೋಪಾಲ; 5. ಗಿರಣಿ; 6. ಕಾರಕೂನ' 8. ಸುರಸಂಗ; 10. ರೋದನ; 11. ಮಧುಕರ; 12. ಆಸ್ತಿಭಾಗ; 13. ವೇದನೆ.

# ನಮ್ಮೆಲ್ಲರ ಮೂಲ ಪಿತಾಮಹ ಯಾರು?

ಇದು ಅತ್ಯಂತ ಕುತೂಹಲದ ಒಂದು ಪ್ರಶ್ನೆ: 'ಪ್ರಾಣಿ ಸಾಮ್ರಾಜ್ಯಕ್ಕೆ ಸೇರಿರುವ, ಸ್ತನಿ ವರ್ಗದಲ್ಲಿರುವ, ಪ್ರೈಮೋಟ್‌ಗಳ ಗುಂಪಿನ ನಮ್ಮ ಎಂದರೆ 'ಹೋಮೋ ಸೇಪಿಯನ್'ರ ಉಗಮಕ್ಕೆ ಕಾರಣರಾದ ಮೊದಲ ಮೂಲ ಪಿತೃಗಳು ಎಂದರೆ ಮೂಲ ಮಾತಾಪಿತರು ಯಾರು?'

ವಿಸ್ಮಯ ಎಂದರೆ ಮಾನವ ಶಾಸ್ತ್ರಜ್ಞರಿಗೆ ಲಭ್ಯವಾಗುತ್ತಿರುವ ಪಳೆಯುಳಿಕೆಗಳ ಮತ್ತು ಅವಶೇಷಗಳ ಸ್ಪಷ್ಟ ಸಾಕ್ಷ್ಯಗಳು ನಮ್ಮ ಮೂಲ ಪಿತೃಗಳನ್ನು ಮತ್ತು ಅವರ ಕಾಲವನ್ನು ಹೆಚ್ಚು ಹೆಚ್ಚು ಪ್ರಾಚೀನತೆಗೆ ಕೊಂಡೊಯ್ಯುತ್ತಲೇ ಇವೆ. ಅದೇನೇ ಇದ್ದರೂ ಮೂಲ ವಾನರ ರೂಪಿ ಪ್ರೈಮೇಟ್‌ಗಳಿಂದ (ಚಿತ್ರ – 2) ಮಾನವ ಸಂಕುಲವನ್ನು ಪ್ರತ್ಯೇಕಿಸುವ ಅತ್ಯಂತ ವಿಶಿಷ್ಟ ಲಕ್ಷಣ ಎಂದರೆ 'ದ್ವಿಪಾದಿತ್ವ'. ಎಂದರೆ ಎರಡು ಕಾಲುಗಳ ಮೇಲೆ ನೇರವಾಗಿ ನಿಲ್ಲಬಲ್ಲ, ನಡೆದಾಡಬಲ್ಲ ಸಾಮರ್ಥ್ಯ. ಈ ದೈಹಿಕ ಗುಣ – ಲಕ್ಷಣಗಳನ್ನು ಪಡೆದ ಅತ್ಯಂತ ಪ್ರಾಚೀನ ಜೀವಿಯೇ ನಮ್ಮ ಮೂಲ ಪಿತಾಮಹ. ಹಾಗೆ ಈ ವರೆಗೆ ಪತ್ತೆಯಾಗಿರುವ ನಮ್ಮ ಪೂರ್ವಜ ವಂಶಾವಳಿಯ ಸಂಕ್ಷಿಪ್ತ ಪರಿಚಯ:

* ನಮ್ಮ ಅತ್ಯಂತ ಇತ್ತೀಚಿನ ನೇರ ಪೂರ್ವಜ ಪ್ರಭೇದ 'ಅಸ್ಟ್ರಾಲೋಪಿಕಸ್ ಅಫರೆನ್ಸಿಸ್' ಆಫ್ರಿಕದ ಎಥಿಯೋಪಿಯಾ ದೇಶದ 'ಮಿಕ್ಸ್ ಅವಾಶ್' ಪ್ರದೇಶದಲ್ಲಿ ಲಭಿಸಿದ ಈ ಪ್ರಭೇದದ ಓರ್ವ ಮಹಿಳೆಯ ಅಸ್ಥಿ ಅವಶೇಷಗಳು ಈ ಅಂಶಕ್ಕೆ ಆಧಾರ. 'ಲೂಸಿ' ಎಂಬ ಹೆಸರಿನಿಂದಾಗಿ ಪ್ರಸಿದ್ಧವಾಗಿರುವ ಈ ಮೂಲ ಮಾತೆಯ ಕಾಲ ಈಗ್ಗೆ 3.2 ದಶಲಕ್ಷ ವರ್ಷ ಹಿಂದೆ.

* 'ಲೂಸಿ'ಯ ಅವಶೇಷ ಲಭಿಸಿದ ಪ್ರದೇಶದಲ್ಲೇ ಅಲ್ಲಿಂದ ಅರವತ್ತು ಕಿ.ಮೀ. ದಕ್ಷಿಣದಲ್ಲಿ ಮತ್ತೊಂದು ಪೂರ್ವ ಮಾನವ ಪ್ರಭೇದದ




ಪಳೆಯುಳಿಕೆಗಳು ಪತ್ತೆಯಾದುವು. 'ಆರ್ಡಿಪಿತೀಕಸ್ ರ‍್ಯಾಮಿಡಸ್' ಎಂದು ಹೆಸರಿಸಲಾಗಿರುವ, 'ಆರ್ಡಿ' ಎಂಬ ಹ್ರಸ್ವ ನಾಮದಿಂದಲೂ ಖ್ಯಾತವಾಗಿರುವ ಈ ಪ್ರಭೇದದ ಕಾಲ 4.4 ದಶಲಕ್ಷ ವರ್ಷ ಹಿಂದೆ.

* ಆಫ್ರಿಕಾದ 'ಛಡ್' ದೇಶದಲ್ಲಿ ಸಿಕ್ಕಿ ಅಧ್ಯಯನಕ್ಕೆ ಒಳಪಟ್ಟು ಇತ್ತೀಚೆಗೆ ಕಾಲವು ನಿರ್ಣಯಗೊಂಡಿರುವ ಮತ್ತೊಂದು ಪೂರ್ವಮಾನವ ಪ್ರಭೇದ ನಮ್ಮ ಮೂಲ ಪಿತೃಗಳನ್ನು ಮತ್ತೂ ಹಿಂದಿನ ಕಾಲಕ್ಕೆ ಒಯ್ದಿದೆ. ಸದ್ಯಕ್ಕೆ ತಿಳಿದಿರುವ ಈ ಅತ್ಯಂತ ಪ್ರಾಚೀನ ಪಿತಾಮಹರ ಕಾಲ ಈಗ್ಗೆ ಏಳು ದಶಲಕ್ಷ ವರ್ಷ ಹಿಂದೆ ಈ ಪ್ರಭೇದದ ಹೆಸರು. 'ಸಹಲಾಂತ್ರೋಪಸ್ ಟ್ಯಾಕಿಡೆನ್ಸಿಸ್' (ಚಿತ್ರ – 1), 'ಟೌಮಾಯೀ' ಎಂಬ ಹ್ರಸ್ವ ಹೆಸರಿನ ಈ ಪ್ರಭೇದವೇ ಸದ್ಯದವರೆಗೆ ತಿಳಿದಿರುವ ಅತ್ಯಂತ ಪ್ರಾಚೀನ ಆದ್ಯ ಪಿತಾಮಹ. ಈ ಎಲ್ಲ ಪಿತೃಗಳ ಮೂಲ ನೆಲೆಯೂ ಆಫ್ರಿಕಾ ಖಂಡವೇ ಆಗಿತ್ತೆಂಬ ಅಚ್ಚರಿಯ ಅಂಶವನ್ನು ಗಮನಿಸಿದಿರಿ ತಾನೇ?

■ ಎನ್. ವಾಸುದೇವ್